# ಪ್ರಜಾ ಮಾಹಿತಿ

(ಮಾಹಿತಿ ಹಕ್ಕು ವಿಷಯಕ್ಕೆ ಮೀಸಲಾದ ತ್ರೈಮಾಸಿಕ)

ಸಂಖ್ಯೆ-4/2007 ಅಕ್ಟೋಬರ್ -ಡಿಸೆಂಬರ್ 2007

## ಬಾಲ ಕಾರ್ಮಿಕ ದಂಧೆ - ಮಾಹಿತಿ ಕಾಯ್ದೆಯ ಬೆಳಕು!

**ಮ**ಧ್ಯಪ್ರದೇಶದ ಓರ್ವ ಸಮಾಜ ಕಾರ್ಯಕರ್ತರು 2005ರ ಮಾಹಿತಿ ಹಕ್ಕು ಕಾಯ್ದೆಯ ಪ್ರಭಾವವನ್ನು ಬಳಸಿ ಸರ್ಕಾರಿ ಕಛೇರಿಯಲ್ಲಿರುವ ಭ್ರಷ್ಟಾಚಾರದ ಪ್ರಕರಣವೊಂದನ್ನು ಬೆಳಕಿಗೆ ತಂದಿದ್ದಾರೆ. ಭ್ರಷ್ಟಾಚಾರ ಹಲವು ಕೋಟಿಗಳದ್ದು. ಇವೆಲ್ಲವೂ ಬಾಲ ಕಾರ್ಮಿಕರ ಯೋಜನೆಗಳ ಲೆಕ್ಕದ್ದು.

ಮಧ್ಯಪ್ರದೇಶ ಸರ್ಕಾರವು ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐಎಲ್‌ಓ) ಹಣಕಾಸು ಒದಗಿಸಿದ ಇಂಡಸ್ ಬಾಲ ಕಾರ್ಮಿಕ ಯೋಜನೆಯನ್ನು ಜಾರಿಗೊಳಿಸಿದೆ. ಇದನ್ನು ರಾಜ್ಯದ 5 ಜಿಲ್ಲೆಗಳಲ್ಲಿ ಕಾರ್ಯಗತಗೊಳಿಸಲು ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆ (ಎನ್‌ಸಿಎಲ್‌ಸಿ) ಎಂಬ ನೊಂದಾಯಿತ ಸಂಸ್ಥೆಗೆ ವಹಿಸಲಾಗಿದೆ. ಈಲ್ಲೆಯ ಜಿಲ್ಲಾಧಿಕಾರಿ ಎನ್‌ಸಿಎಲ್‌ಸಿ ಅಧ್ಯಕ್ಷರು. ಜಿಲ್ಲಾ ಕಾರ್ಮಿಕ ಅಧಿಕಾರಿ ಇದರ ಕಾರ್ಯದರ್ಶಿ. ಐದು ಮಂದಿ ಯೋಜನಾ ನಿರ್ದೇಶಕರು ಈ ಯೋಜನೆಯ ಪ್ರಗತಿಯನ್ನು ಪರಿವೀಕ್ಷಿಸುತ್ತಾರೆ. ಈ ಯೋಜನೆಗೆಂದು ಒಂದು ಜಿಲ್ಲೆಗೆ ಮಂಜೂರಾದ ಮೊತ್ತ 31.80 ಲಕ್ಷ ರೂ.

ಪ್ರಥಮ ಚಿಕಿತ್ಸೆ ಕಿಟ್ ಈ ಯೋಜನೆಯಡಿ ಫಲಾನುಭವಿಗಳಿಗೆ ಹಂಚಿಕೆಯಾಗಬೇಕಿದ್ದ ಒಂದು ವಸ್ತು. ಇದರಲ್ಲಿ ಭ್ರಷ್ಟಾಚಾರ ಇಣುಕಿದೆ ಎಂಬ ಸುದ್ದಿ ಮಧ್ಯಪ್ರದೇಶದ ಮಾಹಿತಿ ಕಾರ್ಯಕರ್ತ ಡಾ.ರಾಕೇಶ್ ರಂಜನ್‌ರ ಕಿವಿಗೆ ಬಿತ್ತು. ಇವರಿಗೆ ಕಾಮನ್‌ವೆಲ್ತ್ ಹ್ಯೂಮನ್ ರೈಟ್ಸ್ ಇನಿಶಿಯೇಟಿವ್ (ಸಿಹೆಚ್‌ಆರ್‌ಐ)ನ ಬೆಂಬಲವೂ ದೊರಕಿತು. ತಕ್ಷಣವೇ ರಂಜನ್ ಈ ಯೋಜನೆ ಜಾರಿಗೆ ಬಂದಿದ್ದ ಕತ್ನಿ ಜಿಲ್ಲೆಯ ಇಂಡಸ್ ಯೋಜನಾ ಕಛೇರಿ ಮಾಹಿತಿ ಅಧಿಕಾರಿಗೆ ಮಾಹಿತಿ ಹಕ್ಕು ಕಾಯ್ದೆ (2005)ಯಡಿ ಅರ್ಜಿ ಸಲ್ಲಿಸಿದರು. ಅವರು ತಮ್ಮ ಅರ್ಜಿಯಲ್ಲಿ ಪ್ರಥಮ ಚಿಕಿತ್ಸೆ ಕಿಟ್‌ಗಳ ಸಂಖ್ಯೆ, ಪ್ರತಿ



ಕಿಟ್‌ನ ಬೆಲೆ, ಕಿಟ್‌ನ ಸಲಕರಣೆಗಳ ವಿವರವನ್ನು ಕೇಳುವುದರ ಜೊತೆಗೆ ಕಾಯ್ದೆಯ ಕಲಂ 4(1)(ಬಿ) ಅನ್ವಯ ತೆಗೆದುಕೊಂಡ ಹೆಜ್ಜೆಗಳ ಪೂರ್ಣ ಮಾಹಿತಿಯನ್ನು ಕೋರಿದ್ದರು.

ಡಾ. ರಂಜನ್‌ರಿಗೆ ಮಾಹಿತಿ ಸಿಕ್ಕಿತು. 2005ರ ಆಗಸ್ಟ್‌ನಲ್ಲಿ ತಲಾ 3,500 ರೂ.ನಂತೆ 40 ಕಿಟ್‌ಗಳನ್ನು ಖರೀದಿಸಲಾಗಿತ್ತು. ಇವು 40 ತರಬೇತಿ ಕೇಂದ್ರಗಳಿಗೆ ಹಂಚಲಾಗಿತ್ತು. ಈ ಮಾಹಿತಿಯಿಂದ ಭ್ರಷ್ಟಾಚಾರದ ಯಾವುದೇ ಸಾಕ್ಷ್ಯ ದೊರಕದಿರುವುದರಿಂದ ರಂಜನ್ ಹೆಚ್ಚಿನ ತನಿಖೆ ಮಾಡಲು ಉದ್ದೇಶಿಸಿದರು. ಮೊತ್ತಮೊದಲಾಗಿ,ಸ್ಥಳೀಯಮಾರಾಟಗಾರರಿಂದ ಪ್ರಥಮ ಚಿಕಿತ್ಸೆ ಕಿಟ್‌ಗಳ ಅಂದಿನ ದರದ ಅಂದಾಜುಪಟ್ಟಿ (ಕೊಟೇಶನ್)ಯನ್ನು ಸಂಗ್ರಹಿಸಿದರು. ಅತ್ಯಂತ ಕಡಿಮೆ ದರವನ್ನು ನಮೂದಿಸಿದ್ದ ಪಾರಸ್ ಫರ್ಮಾಸೆಟಿಕಲ್ಸ್, ಕಿಟ್ ಒಂದಕ್ಕೆ 760 ರೂ. ನಮೂದಿಸಿತ್ತು. ಅಲೆಂಬಿಕ್ ಫರ್ಮಾಸೆಟಿಕಲ್ಸ್‌ನವರು 930 ರೂ. ಎಂದರೆ, ಗರಿಷ್ಟ ಮೊತ್ತ ಗ್ಲಾಕ್ಸೋ ಸ್ಮಿತ್‌ಕ್ಲೈನ್ ಬೀಚಮ್‌ನವರದ್ದು, 970 ರೂ.

ಇತ್ತ, ಬಾಲ ಕಾರ್ಮಿಕ ಯೋಜನೆಯ ಜಾರಿ ಏಜೆನ್ಸಿ 40 ಕಿಟ್ ಖರೀದಿಗೆ 1,40,000 ರೂ. ಖರ್ಚು ಮಾಡಿತ್ತು. ಗ್ಲಾಕ್ಸೋನ ದುಬಾರಿ ಬೆಲೆ 970 ರೂ.ಗಿಂತಲೂ ಸರಿಸುಮಾರು 4 ಪಟ್ಟು ಹೆಚ್ಚು ದರ ನೀಡಿತ್ತು! ಇನ್ನೂ ಸ್ವಾರಸ್ಯವೆಂದರೆ, ಪಾರದರ್ಶಕ ಹರಾಜು ಕ್ರಮದಲ್ಲಿ ಈ 3,500 ಸಾವಿರ ರೂ. ಅಂದಾಜು ಅತ್ಯಂತ ಕಡಿಮೆ ಬೆಲೆಯಾಗಿತ್ತು!! ಈ ಲೆಕ್ಕದಂತೆ, ಬಹಿರಂಗ ಮಾರುಕಟ್ಟೆಯಲ್ಲಿ ಅತ್ಯಂತ ದುಬಾರಿ ಬೆಲೆಯ ಕಿಟ್ ಖರೀದಿಸಿದರೂ ಕೇವಲ

ಪುಟ-4 ನೋಡಿ >>>

### ಮುಂದಿನ ಪುಟದಲ್ಲಿ....


- ಕೈಬರಹದ ಅರ್ಜಿಗೆ ಮನ್ನಣೆ : ಮಾಹಿತಿ ಆಯೋಗ ಆದೇಶ -2
- ಸಾರ್ವಜನಿಕ ಪ್ರಾಧಿಕಾರ- ಮಾಹಿತಿಗೆ ಶುಲ್ಕ -2
- ಮಾಹಿತಿ ಕೇಂದ್ರಕ್ಕೆ ಹೊಸ ಸೇರ್ಪಡೆ -3
- ರಾಷ್ಟ್ರೀಯ ಉಳಿತಾಯ ಪತ್ರ -ಒತ್ತಾಯ ಸಲ್ಲ -4

## ಕೈಬರಹದ ಅರ್ಜಿಗೆ ಮನ್ನಣೆ: ಮಾಹಿತಿ ಆಯೋಗ ಆದೇಶ

**ಮಾ**ಹಿತಿ ಹಕ್ಕು ಕಾಯ್ದೆಯನ್ವಯ ಅರ್ಜಿದಾರನೋರ್ವ ಕೈಬರಹದಲ್ಲಿ ಸಲ್ಲಿಸಿದ ಅರ್ಜಿಯನ್ನು ಅಧಿಕಾರಿಗಳು ಮಾನ್ಯ ಮಾಡಬೇಕು. ಟೈಪ್ ಮಾಡಿಯೇ ಅರ್ಜಿ ಸಲ್ಲಿಸಬೇಕೆಂದು ಒತ್ತಾಯಿಸಕೂಡದು ಎಂದು ಕೇಂದ್ರ ಮಾಹಿತಿ ಆಯೋಗ ತೀರ್ಪು ನೀಡಿದೆ. ಅರ್ಜಿ ಕೈ ಬರಹದಲ್ಲಿದೆ ಎಂಬ ಕಾರಣಕ್ಕಾಗಿ ಮಾಹಿತಿ ನೀಡಲು ನಿರಾಕರಿಸಿದ ಡಿಡಿಎ ನಿರ್ದೇಶಕರು ಮತ್ತು ಸಾರ್ವಜನಿಕ ಮಾಹಿತಿ ಅಧಿಕಾರಿ ಜೆ.ಪಿ.ಅಗರ್‌ವಾಲ್‌ರ ಕ್ರಮವನ್ನು ಆಕ್ಷೇಪಿಸಿದ ಆಯೋಗ, ತನ್ನ ಮುಂದೆ ಹಾಜರಾಗುವಂತೆ ಅಧಿಕಾರಿಗೆ ಆದೇಶ ನೀಡಿತಲ್ಲದೆ, ಕಾಯ್ದೆ ಉಲ್ಲಂಘನೆಗಾಗಿ 25,000 ರೂ. ದಂಡ ವಿಧಿಸಬಾರದೇಕೆ ಎಂದು ಕೇಳಿ ಶೋಕಾಸ್ ನೋಟೀಸ್ ನೀಡಿದೆ.



ಅಂಬೇಡ್ಕರ್ ಆವಾಸ್ ಯೋಜನಾ ಕಾರ್ಯಕ್ರಮದನ್ವಯ ಫ್ಲಾಟ್ ಖರೀದಿಗೆ ಸಲ್ಲಿಸುವ ವಿಧಿವಿಧಾನಗಳ ಕುರಿತು ಮಾಹಿತಿ ಕೇಳಿ ತಾನು 2006ರ ಫೆ.22ರಂದು ಕೈ ಬರಹದಲ್ಲಿ ಅರ್ಜಿಯೊಂದನ್ನು ಸಲ್ಲಿಸಿದ್ದೆನೆಂದು, ಆದರೆ ಅಗರ್‌ವಾಲ್ ಇದನ್ನು ಸ್ವೀಕರಿಸಲು ನಿರಾಕರಿಸಿ ಟೈಪ್ ಮಾಡಿಯೇ ಅರ್ಜಿ ಸಲ್ಲಿಸಬೇಕೆಂದು ಪಟ್ಟು ಹಿಡಿದರು ಮತ್ತು ತನಗೆ ಬೇಕಾದ ಮಾಹಿತಿ ನೀಡಲು ನಿರಾಕರಿಸಿದರು ಎಂದು ಸುಂದರ್ ನಗರ ನಿವಾಸಿ ರೇಖಾ ಕೋಲಿ ತಮ್ಮ ದೂರಿನಲ್ಲಿ ಆರೋಪಿಸಿದ್ದರು.

ತನಗೆ ಅಗತ್ಯ ಮಾಹಿತಿ ನೀಡಲು ನಿರಾಕರಿಸಿದುದಕ್ಕಾಗಿ ಮಾಹಿತಿ ಹಕ್ಕು ಕಾಯಿದೆಯ 20ನೇ ಸೆಕ್ಷನ್ನಿನನ್ವಯ ಅಗರ್‌ವಾಲ್ ವಿರುದ್ಧ ಕ್ರಮ ಕೈಗೊಳ್ಳ ಬೇಕೆಂದು ಕೋರಿ ಕೋಲಿ ಡಿಡಿಎ ಉಪಾಧ್ಯಕ್ಷರಿಗೆ ಮನವಿಯೊಂದನ್ನು ಸಲ್ಲಿಸಿದರು.

ಕೇಳಿದ ಮಾಹಿತಿ ಸರಳ ಮತ್ತು ನೇರ. ಅಲ್ಲದೆ ಲಿಖಿತ ಅರ್ಜಿ ಸಲ್ಲಿಸಬೇಕಾಗಿಲ್ಲವೆಂದು ಕಾಯಿದೆಯಲ್ಲಿ ಸ್ಪಷ್ಟವಾಗಿ ಹೇಳಿದೆ. ಆದುದರಿಂದ ಅಧಿಕಾರಿಯ ವಾದ ಹುರುಳಿಲ್ಲದ್ದು ಎಂದು ಆಯೋಗ ಅಭಿಪ್ರಾಯಪಟ್ಟಿದೆ. ಕೋಲಿ ಅವರು ಕೇಳಿದ ಎಲ್ಲ ಆರು ಅಂಶಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಉಚಿತವಾಗಿ ಒದಗಿಸಬೇಕು ಎಂದು ಆಯೋಗ ಆದೇಶ ನೀಡಿದೆ.

## ಸಾರ್ವಜನಿಕ ಪ್ರಾಧಿಕಾರ- ಮಾಹಿತಿಗೆ ಶುಲ್ಕ

**ಮಾ**ಹಿತಿ ಹಕ್ಕು ಕಾಯ್ದೆಯಡಿ ಕೇಳಿದ ಮಾಹಿತಿಗಳನ್ನು ಒದಗಿಸಲು ಆಗುವ ಅಸಲಿ ಖರ್ಚನ್ನು ಅರ್ಜಿದಾರರಿಂದ ಪಡೆಯಬಹುದು ಎಂದು ಕೇಂದ್ರ ಮಾಹಿತಿ ಆಯೋಗ ತೀರ್ಪಿತ್ತಿದೆ. ಈ ತೀರ್ಮಾನ ದೂರಗಾಮಿ ಪರಿಣಾಮ ಗಳನ್ನು ಒಳಗೊಂಡಿದ್ದು ಭವಿಷ್ಯದಲ್ಲಿ ಅರ್ಜಿದಾರರ ಹಿತ, ಕಾಯ್ದೆಯ



ಉದ್ದೇಶಗಳನ್ನು ಹಾಳುಗೆಡವುತ್ತದೆಯೇ ಎಂಬ ಪ್ರಶ್ನೆ ಮೂಡದಿರದು. ಭಾರತ್ ಸಂಚಾರ್ ನಿಗಮ ನಿಯಮಿತ ಹಾಗೂ ಡಾ. ಬಲ್ವಂತ್ ಸಿಂಗ್‌ರ ಮೇಲ್ಮನವಿ ಸಂದರ್ಭದಲ್ಲಿ, ಕೇಂದ್ರ ಮಾಹಿತಿ ಆಯೋಗ ಖರ್ಚಿಗೆ ತಕ್ಕ ಶುಲ್ಕ ಪಡೆಯಲು ಮಾಹಿತಿ ಹಕ್ಕು ಕಾಯ್ದೆ ಕಲಂ7(3)(ಎ)ನಲ್ಲಿ ಅವಕಾಶವಿದೆ ಎಂದಿದೆ.

ಜೈಪುರದ ನಿವೃತ್ತ ಐಪಿಎಸ್ ಅಧಿಕಾರಿ ಡಾ.ಬಲ್ವಂತ್ 2001ರ ಜನವರಿಯಿಂದ ಗ್ರಾಹಕ ನ್ಯಾಯಾಲಯಗಳಿಂದ ದೋಷಿಯೆಂದು ಗುರ್ತಿಸಲಾದ ಬಿಎಸ್‌ಎನ್‌ಎಲ್ ಉದ್ಯೋಗಿಗಳ ಸಂಖ್ಯೆ, ಅವರ ವಿರುದ್ಧ ಆದೇಶಿಸಲಾದ ಪರಿಹಾರದ ಮೊತ್ತ, ಸಾರ್ವಜನಿಕ ನಿಧಿಯಿಂದ ಬಿಎಸ್‌ಎನ್‌ಎಲ್ ಪಾವತಿಸಿದ ಹಣ, ಈ ಅಧಿಕಾರಿಗಳಿಂದ ವಸೂಲಿಸಿದ ಒಟ್ಟು ಮೊತ್ತ, ಅಪರಾಧಿ ಅಧಿಕಾರಿಗಳ ಪರವಾಗಿ ಪರಿಹಾರ ನೀಡಲು ಬಳಸಿದ ಕಾನೂನು ಪ್ರಾವಿಧಾನ, ದೋಷಿ ಅಧಿಕಾರಿಗಳ ವಿರುದ್ಧ ತೆಗೆದುಕೊಂಡ ಶಿಸ್ತು ಕ್ರಮ, ಈ ವಿಷಯಗಳಲ್ಲಿ ಮಾಹಿತಿ ಕೇಳಿ ಬಿಎಸ್‌ಎನ್‌ಎಲ್‌ಗೆ ಅರ್ಜಿ ಸಲ್ಲಿಸಿದರು.

ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿ ಬಲ್ವಂತ್‌ರಿಗೆ ಪತ್ರ ಬರೆದು, ಈ ಮಾಹಿತಿ ಒದಗಿಸಲು ಖರ್ಚು ಬಾಬತ್ತು 9340 ರೂ. ಪಾವತಿಸ ಬೇಕಾಗುತ್ತದೆ ಎಂದು ತಿಳಿಸಿದರು. ಈ ವಾದವನ್ನು ಆಕ್ಷೇಪಿಸಿ ಅರ್ಜಿದಾರರು ಕೇಂದ್ರ ಆಯೋಗಕ್ಕೆ ಮೇಲ್ಮನವಿ ಸಲ್ಲಿಸಿದರು. ಅರ್ಜಿದಾರರ ಪ್ರಕಾರ, ತಾವು ಕೇಳಿದ ಮಾಹಿತಿ ಅರ್ಧ ಪುಟದಷ್ಟೂ ಇಲ್ಲ. ಕೇವಲ ಮಾಹಿತಿಯನ್ನು ಕೊಡದಿರುವ ದುರುದ್ದೇಶದಿಂದಲೇ ಇಷ್ಟು ದೊಡ್ಡ ಮೊತ್ತದ ಖರ್ಚು ಹೇಳಲಾಗಿದೆ. ಈ ಬೇಡಿಕೆ ಮಾಹಿತಿ ಹಕ್ಕಿನ ಮೂಲ ಉದ್ದೇಶಕ್ಕೆ ವಿರುದ್ಧವಾಗಿದೆಯೆಂದೂ, ಕೇಂದ್ರ ಮಾಹಿತಿ

..>>>> 2ನೇ ಪುಟದಿಂದ

ಅಧಿಕಾರಿಯು ಯಾವುದೇ ಶುಲ್ಕ ಪಡೆಯದೆ ಮಾಹಿತಿ ನೀಡುವಂತೆ ನಿರ್ದೇಶಿಸಬೇಕೆಂದು ಡಾ. ಬಲ್ವಂತ್ ಆಯೋಗವನ್ನು ಕೋರಿದ್ದರು. ಅಲ್ಲದೆ ಕಾಯ್ದೆಯ 20ನೇ ಕಲಂನ ಅನುಸಾರ ಸಿಪಿಐಒ ವಿರುದ್ಧ ಕ್ರಮಕ್ಕೂ ಆಗ್ರಹಿಸಿದ್ದರು.

ಬಿಎಸ್‌ಎನ್‌ಎಲ್ ಪರವಾಗಿ ವಾದಿಸಿದ ಮಾಹಿತಿ ಅಧಿಕಾರಿ, ಕೇಳಿದ ಮಾಹಿತಿ ಸಂಗ್ರಹಿಸಲು 320 ವಲಯುಗಳಿಗೆ, 6 ಪುಟಗಳ ಪ್ರಶ್ನಾವಳಿ ನಮೂನೆಯನ್ನು ಕಳುಹಿಸಬೇಕಾಗುತ್ತದೆ. ಅಂದರೆ 1920 ಪುಟಗಳ ನಕಲು, ತಲಾ 2 ರೂ.ನಂತೆ 3840 ರೂ. ಆಗುತ್ತದೆ. ಬಿಎಸ್‌ಎನ್‌ಎಲ್ 50 ಸಿಜಿಎಂಗಳನ್ನು ಹೊಂದಿದ್ದು, ಈ ಕಛೇರಿಗಳಲ್ಲಿ ಮಾಹಿತಿ ಸಂಗ್ರಹಕ್ಕೆ ತಲಾ 110 ರೂ. ಖರ್ಚು ತಗಲುತ್ತದೆ. ಇದರ ಮೊತ್ತ 5500 ರೂ. ಸೇರಿದಂತೆ ನಾವು ಅರ್ಜಿದಾರರಿಂದ 9340 ರೂ. ಕೇಳಿದ್ದು ನ್ಯಾಯಯುತವಾಗಿದೆ ಎಂದು ಪ್ರತಿಪಾದಿಸಿದ್ದರು. ಎಲ್ಲ ಮಾಹಿತಿಗಳನ್ನು ಸಂಗ್ರಹಿಸಿ ಇಟ್ಟಿದ್ದು, ಯಾವ ಕ್ಷಣದಲ್ಲಿ ಅರ್ಜಿದಾರರು ಹಣ ತುಂಬಿದರೂ ಮಾಹಿತಿ ಒದಗಿಸ ಲಾಗುತ್ತದೆ ಎಂದರು.

ವಿಚಾರಣೆ ವೇಳೆ ವಾದಗಳನ್ನು ಆಲಿಸಿದ ಕೇಂದ್ರ ಆಯೋಗ ಬಿಎಸ್‌ಎನ್‌ಎಲ್‌ನ ವಾದವನ್ನು ಒಪ್ಪಿಕೊಂಡಿತು. ನಾಗರಿಕರು ಕೇಳಿದ ಎಲ್ಲ ಮಾಹಿತಿಗಳನ್ನು ಕಲೆ ಹಾಕಿಟ್ಟುಕೊಳ್ಳಬೇಕೆಂದು ನಿರೀಕ್ಷಿಸುವಂತಿಲ್ಲ. ಅದರಲ್ಲೂ ಬಿಎಸ್‌ಎನ್‌ಎಲ್‌ನಂತ ದೊಡ್ಡ ವ್ಯವಸ್ಥೆಯಲ್ಲಿ ಅಂತಹ ಸಾಧ್ಯತೆ ತೀರಾ ಕಷ್ಟ. ಈ ಪ್ರಕರಣದಲ್ಲಂತೂ ಅರ್ಜಿದಾರರು 2001ರ ನಂತರದ ಎಲ್ಲ ಮಾಹಿತಿ ವಿವರ ಕೇಳಿದ್ದು, ಸಂಗ್ರಹಕ್ಕೆ ಖರ್ಚು ಮಾಡಬೇಕಾಗಿರುವುದು ಸಮರ್ಥನೀಯ ಎಂದು ಅಭಿಪ್ರಾಯ ಪಟ್ಟಿತು.

ಅರ್ಜಿದಾರರು ತಮಗೆ ಲಭ್ಯ ವಾಗಬೇಕಾದ ಮಾಹಿತಿ ಕೇವಲ ಅರ್ಧ ಪುಟದ್ದು ಎಂದಿರಬಹುದಾದರೂ, ಅದನ್ನು ಸಂಗ್ರಹಿಸಲು ಹೆಚ್ಚಿನ ಶ್ರಮವಿದೆ. ಕಾಯ್ದೆಯ ಕಲಂ 7(3)(ಎ) ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ಮಾಹಿತಿಯ ಶುಲ್ಕ ಪಡೆಯಲು ಅಧಿಕಾರ ನೀಡಿದೆ. ಬಿಎಸ್‌ಎನ್‌ಎಲ್ ಮಾಹಿತಿ ಕೊಡದಿರಲೆಂದೇ ದುಬಾರಿ ಶುಲ್ಕ ಸೂಚಿಸಿದೆ ಎಂಬ ವಾದ ಹುರುಳಿಲ್ಲದ್ದು ಎಂದೂ ಸಿಐಸಿ ತೀರ್ಪಿನಲ್ಲಿ ಹೇಳಿದೆ. ಮಾಹಿತಿ ಕಾಯ್ದೆಯಲ್ಲಿ ಮಾಹಿತಿ ನೀಡಿಕೆಗೆ ಮಾದರಿ, ಖರ್ಚಿನ ವಿಧಾನಗಳನ್ನು ಸೂಚಿಸಿಲ್ಲ. ಅಲ್ಲಿಯವರೆಗೆ ನಾಗರಿಕರು ಆಕ್ಷೇಪಿಸುವಂತಿಲ್ಲ. ಈ ಪ್ರಕರಣದಲ್ಲಿ ಒಂದು ಅಪವಾದವೆಂಬಂತೆ, ಈಗಾಗಲೇ ಸಂಗ್ರಹಿಸಿರುವ ಮಾಹಿತಿಯನ್ನು ಸಿಪಿಐಒ ಅರ್ಜಿದಾರರಿಂದ ಒಂದು ಸಾವಿರ ರೂ. ಖರ್ಚು ಪಡೆದು ಒದಗಿಸಬೇಕೆಂದು ಕೇಂದ್ರ ಮಾಹಿತಿ ಆಯೊಗ ಆದೇಶಿಸಿದೆ.

**(ಮೇಲ್ಮನವಿ ನಂ.27/ಐಸಿಪಿಬಿ/ 2006)**



## ಮಾಹಿತಿ ಕೇಂದ್ರಕ್ಕೆ ಹೊಸ ಸೇರ್ಪಡೆ

**ಮಾಹಿತಿ ಹಕ್ಕು ಬಗ್ಗೆ ಸಮಗ್ರವಾದ ಸಂಪನ್ಮೂಲ ಕೇಂದ್ರ ಸ್ಥಾಪನೆ ಮಡಬೇಕೆಂಬ ದೃಷ್ಟಿಯಿಂದ ಕ್ರಿಯೇಟ್ ಕ್ರಮ ಕೈಗೊಂಡಿದೆ . ಮಾಹಿತಿ ಹಕ್ಕಿಗೆ ಸಂಬಂಧಪಟ್ಟ ದಾಖಲೆ ಒಂದೆಡೆ ದೊರೆಯುವಂತೆ ಮಾಡಲು ಮಾಹಿತಿ ಕೇಂದ್ರ ಸ್ಥಾಪಿಸಿದೆ.**

**ಈ ಕೆಳಕಂಡ ದಾಖಲೆಗಳು/ ಬರಹ ಸಾಮಗ್ರಿಯು ಮಾಹಿತಿ ಕೇಂದ್ರದಲ್ಲಿ ಇದೀಗ ಲಭ್ಯವಿವೆ.**

1. ಪಂಚಾಯತ್ ರಾಜ್ ಮತ್ತು ಗ್ರಾಮೀಣ ಅಭಿವೃದ್ಧಿ ಇಲಾಖೆ ಮಾಡಿದ ಸ್ವಯಂ ಘೋಷಿತ ಪ್ರಕಟನೆಗಳು ಮತ್ತು ಆರ್‌ಟಿಐ ಕುರಿತ ಎಲ್ಲ ಸುತ್ತೋಲೆಗಳು.
2. ಕನಾಟಕ ಪೋಲೀಸ್ ಇಲಾಖೆ ಮಾಡಿದ ಸ್ವಯಂ ಘೋಷಿತ ಪ್ರಕಟನೆಗಳು
3. ತೂಕ ಅಳತೆ ಕಾನೂನು ಇಲಾಖೆಯು ಮಾಡಿದ ಸ್ವಯಂ ಘೋಷಿತ ಪ್ರಕಟನೆಗಳು
4. ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮಾಡಿದ ಸ್ವಯಂ ಘೋಷಿತ ಪ್ರಕಟನೆಗಳು
5. ಕರ್ನಾಟಕ ವಿಧಾನಸಭೆ ರೂಪಿಸಿದ ನಿಯಮಗಳು
6. ಬೆಂಗಳೂರು ಮಹಾನಗರ ಪಾಲಿಕೆ ಆರ್‌ಟಿಐ ಸೆಲ್ ಸ್ಥಾಪಿಸಲು ಹೊರಡಿಸಿದ ಸುತ್ತೋಲೆ
7. ಸೆಕ್ರೆಟರಿಯೇಟ್ ತರಬೇತಿ ಸಂಸ್ಥೆ ತಯಾರಿಸಿದ ತರಬೇತಿ ಸಾಮಗ್ರಿ

**ಈ ಕೆಳಗಿನವುಗಳ ಪಿಐಒ/ಎಪಿಐಒ ಮತ್ತು ಮೇಲ್ಮನವಿ ಪ್ರಧಿಕಾರಗಳ ಪಟ್ಟಿ ನಮ್ಮಲ್ಲಿ ಲಭ್ಯ :-**


1. ಮೈಸೂರು ಮಹಾ ನಗರ ಪಾಲಿಕೆ
2. ಸಾರ್ವಜನಿಕ ರಕ್ಷಣಾ ಇಲಾಖೆ
3. ಪಂಚಾಯತ್ ರಾಜ್ ಮತ್ತು ಗ್ರಾಮೀಣ ಅಭಿವೃದ್ಧಿ
4 ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ
5. ಕರ್ನಾಟಕ ಲೋಕಾಯುಕ್ತ
6. ಕರ್ನಾಟಕ ನಾಗರಿಕ ಸೇವಾ ಆಯೋಗ
7. ಸಹಕಾರ ಸಂಸ್ಥೆಗಳ ನೊಂದಣಿ ಕಛೇರಿ
8. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

# ರಾಷ್ಟ್ರೀಯ ಉಳಿತಾಯ ಪತ್ರ – ಒತ್ತಾಯ ಸಲ್ಲ

ನಿಮ್ಮ ನಿವೇಶನ, ಫ್ಲಾಟ್ ನೊಂದಾವಣಿ ವೇಳೆ ಅಥವಾ ಮನೆ ನಕ್ಷೆ, ಖಾತಾ ಮಾಡಿಕೊಳ್ಳುವ ಸಂದರ್ಭದಲ್ಲಿ ಸರ್ಕಾರಿ ಅಧಿಕಾರಿಗಳು ರಾಷ್ಟ್ರೀಯ ಉಳಿತಾಯ ಪತ್ರ (ಎನ್‌ಎಸ್‌ಸಿ) ಖರೀದಿಸಲು ಸೂಚಿಸಬಹುದು. ಮುಂದಿನ ಬಾರಿ ಇದು ನಿಮಗಿಷ್ಟ ವಿಲ್ಲದಿದ್ದರೆ ಚೌಕಾಶಿಯಿಲ್ಲದೆ 'ಆಗದು' ಎನ್ನಿ. ಕರ್ನಾಟಕದ ಮಾಹಿತಿ ಆಯೋಗ ಹೊರಡಿಸಿರುವ ಒಂದು ಮಹತ್ವದ ನಾಗರಿಕ ಪರ ತೀರ್ಮಾನದಂತೆ, ರಾಜ್ಯ ಸರ್ಕಾರ ಸ್ಪಷ್ಟ ನಿರ್ದೇಶನ ವಿತ್ತಿದ್ದಲ್ಲಿ ಮಾತ್ರ ಎನ್‌ಎಸ್‌ಸಿ ಖರೀದಿಸಲು ಹೇಳಬಹುದೇ ವಿನಃ ಇದನ್ನು ನಿಯಮದಂತೆ ಅಧಿಕಾರಿಗಳು ಹೇರುವಂತಿಲ್ಲ.

ಮೈಸೂರಿನ ಡಾ.ಅನಿಲ್ ಕುಮಾರ್ ಅಲ್ಲಿನ ನಗರಪಾಲಿಕೆಯಲ್ಲಿ ತಮ್ಮ ಮನೆ ಯೋಜನೆಯ ಮಂಜೂರಾತಿ ಕೋರಿದ್ದರು. ಸಂಬಂಧಿತ ಅಧಿಕಾರಿ 25 ಸಹಸ್ರ ಮೌಲ್ಯದ ಎನ್‌ಎಸ್‌ಸಿ ಪಡೆಯಲೇಬೇಕೆಂದು ಷರತ್ತು ವಿಧಿಸಿದ. ಈ ಬೇಡಿಕೆ ಒಪ್ಪದ ಕುಮಾರ್ ಮಾಹಿತಿ ಕಾಯ್ದೆಯಡಿ ನಗರ ಯೋಜನೆ ಉಪನಿರ್ದೇಶಕರಿಗೆ ಅರ್ಜಿ ಸಲ್ಲಿಸಿ, ಸಾರ್ವಜನಿಕ ಮಾಹಿತಿ ಅಧಿಕಾರಿಯ ವಿವರ ಹಾಗೂ ಯಾವ ನಿಯಮದಡಿಯಲ್ಲಿ ಉಳಿತಾಯ ಪತ್ರ ಖರೀದಿಸುವ ಷರತ್ತು ಹೇರಲಾಗಿದೆ ಎಂದು ತಿಳಿಯಬಯಸಿದರು. ಉತ್ತರ ಸಿಕ್ಕಿದ್ದು ನಾಲ್ಕು ತಿಂಗಳ ನಂತರ. ಹೇಳಿದ್ದು ಇಷ್ಟೇ, ಉಪ ಆಯುಕ್ತರು ಎನ್‌ಎಸ್‌ಸಿ ಮಾರಾಟದ ಗುರಿ ನಿಗದಿಪಡಿಸಿದ್ದು, ಅದನ್ನು ಮುಟ್ಟಲು ಈ ರೀತಿ ಸೂಚಿಸಲಾಗಿದೆ!

ಡಾ.ಅನಿಲ್ ರಾಜ್ಯ ಮಾಹಿತಿ ಆಯೋಗದ ಮುಂದೆ ಮೇಲ್ಮನವಿ ಸಲ್ಲಿಸಿ, ಈ ಗುರಿಗಳಿಗೆ ಕಾನೂನಿನ ಮಾನ್ಯತೆ ಇಲ್ಲವೆಂದೂ, ತಮಗೆ ದೊರಕಿದ ಉತ್ತರ ತಪ್ಪು ಮತ್ತು ಹಾದಿ ತಪ್ಪಿಸುವಂತದು ಎಂದೂ ವಾದಿಸಿದರು. ಮಾಹಿತಿ ವಿಳಂಬಿಸಿದ್ದಕ್ಕೆ ಪರಿಹಾರ ಕೋರಿದ ಕುಮಾರ್, ಅನುಮತಿ ತಡವಾದುದರಿಂದ ಹೆಚ್ಚಾದ ಕಟ್ಟಡ ನಿರ್ಮಾಣ ವೆಚ್ಚ ವ್ಯತ್ಯಾಸವನ್ನು ತುಂಬಿಕೊಡಲು ವಿನಂತಿಸಿದರು.




ಸರ್ಕಾರ ಫೀಲ್ಡ್ ಆಫೀಸರ್‌ಗಳಿಗೆ ಎನ್‌ಎಸ್‌ಸಿಯ ಮೂಲಕ ಸಂಗ್ರಹಿಸುವ ಹಣದ ಗುರಿಯನ್ನು ನಿಗದಿಪಡಿಸುವುದನ್ನು ಆಯೋಗ ಗಮನಿಸಿತು. ಆದರೆ ಈ ಕುರಿತಂತೆ ನಾಗರಿಕರನ್ನು ಒತ್ತಡಕ್ಕೀಡು ಮಾಡುವುದಾಗಲೀ, ಕಿರುಕುಳ ನೀಡುವುದಾಗಲಿ ಸಾಧುವಲ್ಲ. ಹಾಗಾಗಿ ಆಯೋಗ ಹಣಕಾಸು ವಿಭಾಗ ಮುಖ್ಯ ಕಾರ್ಯದರ್ಶಿಗೆ, ಯಾವುದೇ ಕಾರಣಕ್ಕೆ ಉಳಿತಾಯ ಪತ್ರ ಖರೀದಿಸಲು ನಾಗರಿಕರ ಮೇಲೆ ಒತ್ತಡ ಹೇರದಂತೆ ಅಧಿಕಾರಿಗಳಿಗೆ ಸ್ಪಷ್ಟೀಕರಣ ನೀಡಲು ಆದೇಶಿಸಿತು.

ಕರ್ನಾಟಕ ಮಾಹಿತಿ ಆಯೋಗ, ಮೈಸೂರು ನಗರ ಪಾಲಿಕೆಗೆ ತಡವಾಗಿ ಪ್ರತಿಕ್ರಿಯಿಸಿದ್ದಕ್ಕೆ ಹಾಗೂ ಮಾನಸಿಕ ಹಿಂಸೆಗೀಡುಮಾಡಿದ್ದಕ್ಕೆ ಡಾ.ಅನಿಲ್ ಕುಮಾರ್‌ರಿಗೆ ಒಂದು ಸಾವಿರ ರೂ. ದಂಡ ವಿಧಿಸಿತು. ಉಳಿದ ಪರಿಹಾರಗಳ ಕುರಿತು ಕುಮಾರ್ ಒತ್ತಾಯಿಸಲಿಲ್ಲ.

## ಬಾಲ ಕಾರ್ಮಿಕ ದಂಧೆ

>>> 1ನೇ ಪುಟದಿಂದ

38,800 ರೂ. ಮಾತ್ರ ಖರ್ಚಾಗುತ್ತಿತ್ತು. ಇಡೀ ಗುತ್ತಿಗೆಯಲ್ಲಿ ಪಾಲ್ಗೊಂಡ 'ಫಲಾನುಭವಿಗಳು' ಒಂದು ಲಕ್ಷರೂ.ಗೂ ಮಿಕ್ಕು ಭ್ರಷ್ಟಾಚಾರ ಮಾಡಿರುವುದು ಸ್ಪಷ್ಟವಾಗಿತ್ತು.

ಡಾ.ರಂಜನ್ ಇಲ್ಲಿಗೇ ಸುಮ್ಮನುಳಿಯಲಿಲ್ಲ. ಪತ್ರಕರ್ತರೊಬ್ಬರನ್ನು ಕರೆದೊಯ್ದು 10 ತರಬೇತಿ ಕೇಂದ್ರಗಳಲ್ಲಿ ಖುದ್ದಾಗಿ ಕಿಟ್‌ನ್ನು ಪರೀಕ್ಷಿಸಿದರು. ರಂಜನ್‌ರಿಗೆ ಶಾಕ್, ಯಾವುದೇ ಕಿಟ್ ಮೇಲೆ ಅಧಿಕೃತ ಕಂಪನಿಯೊಂದರ ಲೇಬಲ್ ಕೂಡ ಇರಲಿಲ್ಲ! ಮೂರು ಕೇಂದ್ರಗಳಲ್ಲಂತೂ ಕಿಟ್ ಒಳಗೆ ಖಾಲಿ. ಉಳಿದ ಏಳರಲ್ಲೂ ಸಲಕರಣೆಗಳ ಗುಣಮಟ್ಟ ಕಳಪೆಯಾಗಿತ್ತು. ಹಾಗಿದ್ದೂ ಜಿಲ್ಲಾಡಳಿತ ಯಾವುದೇ ಕ್ರಮ ಕೈಗೊಳ್ಳದಿದ್ದುದರಿಂದ ಡಾ. ರಾಕೇಶ್ ರಂಜನ್ ವಿಷಯವನ್ನು ಐಎಲ್‌ಓ ಗಮನಕ್ಕೆ ತಂದರು.

**[ವೈ.ಜಿ.ಮುರುಳೀಧರನ್‌ರ ಈ ಮೇಲಿನ ಲೇಖನದ ಆಂಗ್ಲ ರೂಪ ಮೊತ್ತಮೊದಲು 'ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್'ನಲ್ಲಿ ಬೆಳಕು ಕಂಡಿದೆ]**

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:

**ಗ್ರಾಹಕರ ಹಕ್ಕು ಶಿಕ್ಷಣ ಮತ್ತು ಜಾಗೃತಿ ವೇದಿಕೆ**

ನಂ.239,5ನೇ 'ಸಿ' ಮುಖ್ಯರಸ್ತೆ,ರೆಮ್ಕೊಲೇಔಟ್,ಹಂಪಿನಗರ,ಬೆಂಗಳೂರು-560 104

ದೂರವಾಣಿ:91-080-23357280,E.mail : creatorg@sify.com , Website : www.creatindia.org